KATK010065012024

ಸ.ಮೊ.202/2024 ಪ್ರಾ ಸಾ 3

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು**

**ಸತ್ರ ಮೊಕದ್ದಮೆ.202/2024**

ಪ್ರಾ.ಸಾ. ಃ **3**

ದೋ.ಸಾ. ಃ **3**

ದಿ.**10.02.2026**

ಹೆಸರು ಃ ಸಣ್ಣಯ್ಯ

ತಂದೆಯ ಹೆಸರು ಃ ಕೆಂಪಯ್ಯ

ವಯಸ್ಸು ಃ **50** ವರ್ಷ

ಉದ್ಯೋಗ ಃ ಕೂಲಿ ಕೆಲಸ

ವಾಸಸ್ಥಳ ಃ ಓಬಳಾಪುರ

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ**

1. ನನಗೆ ಚಾ ಸಾ 1 ಲೋಕೇಶ ಮತ್ತು ಚಾ ಸಾ 2 ಮಮತ ಗೊತ್ತಿದೆ. ದಿ.19.11.2023 ರಂದು ಬೆಳಿಗ್ಗೆ 10.00 ಗಂಟೆಗೆ ಟ್ರಾಕ್ಟರ್ ನಲ್ಲಿ ತಂದಂತಹ ಮಣ್ಣನ್ನು ಹಾಕಲು ಲೋಕೇಶ್ ರವರ ತೋಟಕ್ಕೆ ಹೋಗಿದ್ದೆನು. ಚಾ ಸಾ 4 ಮೋಹನ್ ರವರು ಟ್ರಾಕ್ಟರ್ ನಲ್ಲಿ ಮಣ್ಣನ್ನು ಹೊಡೆಯುತ್ತಿದ್ದರು. ಆರೋಪಿತರು ಲೋಕೇಶ್ ರವರ ಅಣ್ಣ ಮತ್ತು ಅತ್ತಿಗೆಯಂದಿರು. ಲೋಕೇಶ್ ರವರ ತೋಟದ ಪಕ್ಕದಲ್ಲಿ ಆರೋಪಿತರ ತೋಟ ಇದೆ. ಮಧ್ಯಾಹ್ನ 3.45 ಗಂಟೆಗೆ 1 ನೇ ಆರೋಪಿಯಾದ ಬೋರೇಗೌಡರು ತನ್ನ ತೋಟದಿಂದ ಮಚ್ಚು ಹಿಡಿದುಕೊಂಡು ಲೋಕೇಶ್ ರವರ ತೋಟಕ್ಕೆ ಬಂದರು. 2 ನೇ ಆರೋಪಿ ಕಮಲಮ್ಮ ಮತ್ತು 3 ನೇ ಆರೋಪಿ ಶಂಕರಮ್ಮ ಕೂಡಾ ದೊಣ್ಣೆಗಳನ್ನು ಹಿಡಿದುಕೊಂಡು ಲೋಕೇಶ್ ರವರ ತೋಟಕ್ಕೆ ಬಂದರು. ಲೋಕೇಶರವರು ತನ್ನ ತೋಟದಲ್ಲಿ ಓಡಾಡಲು ದಾರಿ ಬಿಟ್ಟುಕೊಂಡಿದ್ದರು, ಆ ದಾರಿ ಇರುವಂತಹ ಜಾಗ ನಮ್ಮದು ಎಂದು ಆರೋಪಿತರು ಲೋಕೇಶನಿಗೆ ಬೋಳಿಮಗನೇ, ಸೂಳೆಮಗನೇ, ಆ ಜಾಗ ನಮಗೆ ಬರಬೇಕು, ಕೋರ್ಟಿನಲ್ಲಿ ಕೇಸ್ ಹಾಕಿದ್ದೀಯಾ, ಎಷ್ಟು ಹೇಳಿದರೂ ಕೇಳುವುದಿಲ್ಲ,

ಜೀವ ಇದ್ದರೆ ತಾನೇ ತೋಟಕ್ಕೆ ಬರುವುದು ಎಂದು ಅವಾಚ್ಯ ಶಬ್ದಗಳಿಂದ ಬೈದು, 1 ನೇ ಆರೋಪಿ ಲೋಕೇಶನನ್ನು ಕೊಲೆ ಮಾಡುವ ಉದ್ದೇಶದಿಂದ ಆತನ ತಲೆಗೆ ಮಚ್ಚಿನಿಂದ ಹೊಡೆದನು. ಮತ್ತೊಂದು ಬಾರಿ ಮಚ್ಚಿನಿಂದ ಹೊಡೆಯಲು ಬಂದಾಗ ಲೋಕೇಶ್ ರವರು ಕೈಯನ್ನು ಅಡ್ಡ ಹಿಡಿದಾಗ ಆ ಮಚ್ಚಿನ ಏಟು ಅವರ ಕೈಗೆ ತಾಗಿತು. ನಂತರ ಮಚ್ಚಿನ ಹಿಂಬದಿಯಿಂದ ಲೋಕೇಶ್ ರವರ ಮೊಣಕೈಗೆ ಹೊಡೆದನು, 2 ಮತ್ತು 3 ನೇ ಆರೋಪಿತರು ಲೋಕೇಶನನ್ನು ಕೆಳಗೆ ಬೀಳಿಸಿ ದೊಣ್ಣೆಗಳಿಂದ ಎಡಗಾಲು ಮತ್ತು ಬೆನ್ನಿಗೆ ಹೊಡೆದರು. ಅಲ್ಲಿದ್ದಂತಹ ನಾನು, ಮೋಹನ ಜಗಳವಾಡುತ್ತಿದ್ದುದನ್ನು ಬಿಡಿಸಿದೆವು. ಮಮತ ಕಾಯಿ ಕೂಡಿಹಾಕುತ್ತಿದ್ದರು. ಅವರಿಗೆ ಹೆದರಿಕೆ ಆಯಿತು. ನಂತರ ಮಮತ ಮತ್ತು ಮೋಹನ್ ಲೋಕೇಶನ ಕಾರಿನಲ್ಲಿ ಲೋಕೇಶನನ್ನು ತುಮಕೂರು ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಹೋದರು. ಈ ಬಗ್ಗೆ ನಾನು ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ. ಆ ದಿನ ಆರೋಪಿತರು ಹೊಡೆಯಲು ಉಪಯೋಗಿಸಿದ ಮಚ್ಚು ಮತ್ತು ದೊಣ್ಣೆಗಳನ್ನು ಈಗ ನೋಡಿ ಗುರುತಿಸಿದ್ದೇನೆ. ಅವುಗಳನ್ನು ಈಗಾಗಲೇ ಮು ಮಾ 1 ರಿಂದ 3 ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲು ಶ್ರೀ.ಪಿ.ಮಹೇಶ್, ವಕೀಲರಿಂದ ಆರೋಪಿತರ ಪರವಾಗಿ :</u>**

2. ತೊರೆ ಬೋರಯ್ಯನ ಮಗ ಮುನೀಶ್ ನಮ್ಮ ಊರಿನವರು. ಕಾಡಯ್ಯನ ಮಗ ರವೀಶ್ ನಮ್ಮ ಊರಿನವರು. ಅವರಿಬ್ಬರೂ ಒಕ್ಕಲಿಗರು. ಮಮತನ ಅಪ್ಪನ ಹೆಸರು ರಂಗಪ್ಪ. ಅವರೆಲ್ಲಾ ಚಿಕ್ಕ ದೊಡ್ಡಪ್ಪನ ಮಕ್ಕಳು ಎಂದರೆ ಸರಿಯಲ್ಲ. ಲೋಕೇಶನ ಜಮೀನು ಇರುವ ಪಕ್ಕದಲ್ಲಿ ಕೊಟ್ಟಿಗಲ್ ಗ್ರಾಮದಲ್ಲಿ ಎಷ್ಟು ಜನ ಇದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ತುಂಬಾ ಜನ ಕೂಲಿ ಮಾಡುವವರು ಇದ್ದಾರೆ ಎಂದರೆ ನಿಜ, ಆದರೆ ಲೋಕೇಶನ ಜಮೀನಿಗೆ ಅವರು ಬರುವುದಿಲ್ಲ. ನಮ್ಮ ಊರಿನಿಂದ ಲೋಕೇಶನ ಜಮೀನಿಗೆ 10 ಕಿ ಮೀ ದೂರ. ನಾನು ಮಮತಳ ತಂದೆ ರಂಪ್ಪನ ಊರಿನವನಾಗಿದ್ದರಿಂದ ಮಮತ ಮತ್ತು ಲೋಕೇಶ್ ನನಗೆ ಬಹಳ ಆತ್ಮೀಯರು ಎಂದರೆ ಸರಿಯಲ್ಲ. ಬೋರೇಗೌಡನ ಮಗಳು ವಿದ್ಯಾಶ್ರೀ ಗೊತ್ತಿಲ್ಲ. ಆ ದಿನ ಆರೋಪಿತರು ಮನೆಗೆ ಬೀಗ ಹಾಕಿಕೊಂಡು ವಿದ್ಯಾಶ್ರೀಯ ಭಾವಮೈದುನನ ಮಗಳ ಮದುವೆಗೆ ಹೋಗಿದ್ದರು ಎಂದರೆ ಸರಿಯಲ್ಲ. ಮೋಹನ ರವರು 4.30 ಗಂಟೆಯವರೆಗೆ ಅದೇ ಜಾಗದಲ್ಲಿ ಮಣ್ಣು ಹೊಡೆಯುತ್ತಿದ್ದು 4.30

ಗಂಟೆಗೆ ಹೋದರು, ಅಲ್ಲಿ ಯಾವುದೇ ಗಲಾಟೆಯಾಗಿಲ್ಲ ಎಂದರೆ ಸರಿಯಲ್ಲ. ಮೋಹನ್ ರವರು ತೋಟಕ್ಕೆ ಮಣ್ಣು ಹೊಡೆದಿದ್ದರು, ಆದರೆ ನಾನು ತೋಟಕ್ಕೆ ಮಣ್ಣು ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಆ ದಿನ ತೋಟಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವಂತಹ ದೊಣ್ಣೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸಿಗಬಹುದು, ಆದರೆ ಇವೇ ದೊಣ್ಣೆಗಳಿಂದ ಹೊಡೆದಿದ್ದು ಎಂದು ಸಾಕ್ಷಿ ಹೇಳುತ್ತಾರೆ. ನಾನು ಲೋಕೇಶ್ ನ ಜೊತೆಗೆ ಬಂದಿದ್ದು, ಅವರು ಹೇಳಿಕೊಟ್ಟಂತೆ ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವಂತಹ ಘಟನೆ ನಡೆಯದಿದ್ದರೂ ಕೂಡಾ ಅವರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಆರೋಪಿತರು ಬೈದಿಲ್ಲ, ಮಚ್ಚು ಮತ್ತು ದೊಣ್ಣೆಗಳಿಂದ ಲೋಕೇಶನಿಗೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಲೋಕೇಶ್ ರವರ ತೋಟವನ್ನು ನೋಡಿಲ್ಲ ಎಂದರೆ ಸರಿಯಲ್ಲ. ಎಲ್ಲಾ ವಸ್ತುಗಳನ್ನು ನ್ಯಾಯಾಲಯದಲ್ಲಿ ಮೊದಲ ಬಾರಿಗೆ ನೋಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು).

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು